ಓ ಎಸ್ ಸಂಖ್ಯೆ: 60/2022
ಪಿ.ಡಬ್ಲ್ಯೂ: 01 (ರೆಡ್ಡೆಪ್ಪ )

ದಿನಾಂಕಃ 04.08.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ವಿ ಹೆಚ್ ಎನ್ ವಕೀಲರಿಂದಃ**

2. ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿಕೊಂಡಿರುತ್ತೇನೆ. ನನ್ನ ತಂದೆಯ ಹೆಸರು ನಾರಾಯಣಪ್ಪ. ನನ್ನ ತಾತನ ಹೆಸರು ಮುನಿವೆಂಕಟಪ್ಪ. ನನ್ನ ತಾತನಿಗೆ ಒಟ್ಟು 7 ಜನ ಮಕ್ಕಳು. ಅವರುಗಳೆಂದರೆ 1) ಲಕ್ಷ್ಮಕ್ಕ, 2) ವೆಂಕಟಲಕ್ಷ್ಮಮ್ಮ, 3) ವೆಂಕಟೇಶಪ್ಪ, 4) ಚಿನ್ನ ಅಕ್ಕಮ್ಮ, 5)ನಾರಾಯಣಪ್ಪ, 6) ಸೋಮಶೇಖರ ಹಾಗೂ 7) ನಾಗಮ್ಮ.

3. ನನ್ನ ತಾತನ ಹೆಸರಿನಲ್ಲಿ ಸುಮಾರು 4-5 ಆಸ್ತಿಗಳು ಇರುತ್ತವೆ. ಅವುಗಳೆಲ್ಲವೂ ಸರ್ಕಾರದಿಂದ ಮಂಜೂರಾಗಿರುವಂತಹ ಜಮೀನುಗಳಾಗಿರುತ್ತವೆ. ಅವುಗಳಲ್ಲಿ ನನ್ನ ತಂದೆಗೆ ಪಾಲು ಬರಬೇಕಲ್ಲವಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಜಮೀನುಗಳ ಸರ್ವೆ ನಂಬರ್ ಗಳನ್ನು ಹೇಳಲು ಬರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ. ನಾವು ವಾಸವಿರುವ ಮನೆಯು ನನ್ನ ತಾಯಿಯ ಹೆಸರಿನಲ್ಲಿರುತ್ತದೆ. ಸದರಿ ಮನೆಯು ನನ್ನ ತಾಯಿಗೆ ಅವರ ತಾಯಿ ಕಡೆಯಿಂದ ಬಂದಿರುತ್ತದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

4. ನಾನು ಹಾಜರುಪಡಿಸಿರುವಂತಹ ನಿಪಿ 1 ರ ವಂಶವೃಕ್ಷದಲ್ಲಿ ನನ್ನ ತಾತನಿಗೆ ಒಟ್ಟು ಎಷ್ಟು ಜನ ಮಕ್ಕಳೆಂದು ತೋರಿಸಿರುವುದಿಲ್ಲ ಎಂದರೆ ಸರಿ.

5. 1 ನೇ ದಾವಾ ಆಸ್ತಿಯಾದ ಸರ್ವೆ ನಂ 185/2 ರ 39 ಗುಂಟೆ ಜಮೀನನ್ನು ನನ್ನ ತಾಯಿ ಹನುಮಪ್ಪ ರವರಿಂದ 2003 ನೇ ಇಸವಿಯಲ್ಲಿ ಕ್ರಯಮಾಡಿಸಿಕೊಂಡಿರುತ್ತಾರೆ. 2 ನೇ ದಾವಾ ಆಸ್ತಿಯಾದ ಸರ್ವೆ ನಂ 187/2 ರ 30 ಗುಂಟೆ ಜಮೀನನ್ನು ನನ್ನ ತಾಯಿ ಅಮ್ಮಯ್ಯಮ್ಮ ರವರಿಂದ 2015 ನೇ ಇಸವಿಯಲ್ಲಿ ಕ್ರಯಮಾಡಿಸಿಕೊಂಡಿರುತ್ತಾರೆ. ಸದರಿ ಕ್ರಯಪತ್ರಗಳನ್ನು

ನಾನು ನೋಡಿರುವುದಿಲ್ಲ. ನನ್ನ ತಾಯಿಯ ಹೆಸರಿನಲ್ಲಿರುವ ಮನೆಯಲ್ಲಿ ನಾನು, ನನ್ನ ತಾಯಿ ಹಾಗೂ ನನ್ನ ಅಣ್ಣ ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ವಾಸವಿರುತ್ತೇವೆ. ನನ್ನ ತಾಯಿ ನಮ್ಮ ಇಬ್ಬರೊಂದಿಗೂ ಇರುತ್ತಾರೆ.

6. ನನ್ನ ತಾಯಿಗೆ ಕ್ಯಾನ್ಸರ್ ಕಾಯಿಲೆ ಇರುತ್ತದೆ ಎಂದರೆ ಸರಿ. ನನ್ನ ತಾಯಿಯನ್ನು ನನ್ನ ಅಣ್ಣ ಆನಂದ್ ಮಾತ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಸಹ ಕೊಡಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಾಯಿ ಕ್ಯಾನ್ಸರ್ ಚಿಕಿತ್ಸೆ ಸಲುವಾಗಿ ಯಾವ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ತಾಯಿ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅವರನ್ನು ನೋಡಲು ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ಚಿಕಿತ್ಸೆಗೆ ನಾನು ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೈರಕೂರಿನಲ್ಲಿ ಬೇರೆಯವರ ಮುಂದೆ ನನ್ನ ತಾಯಿಗೆ ಹಣ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

7. ನನ್ನ ತಂದೆಯ ಹೆಸರಿನಲ್ಲಿರುವ ಪಿತ್ರಾರ್ಜಿತ ಆಸ್ತಿಗಳಲ್ಲಿ ನಾನು ಭಾಗ ಕೇಳಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ.

8. 1 ನೇ ದಾವಾ ಆಸ್ತಿಯು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಸದರಿ ಆಸ್ತಿಯ ಪೈಕಿ 20 ಗುಂಟೆ ಜಮೀನಿಗೆ ನನ್ನ ತಾಯಿ ನನ್ನ ಅಣ್ಣನ ಮಗನಾದ ಪುನಿತ್ ರವರಿಗೆ ದಿನಾಂಕ 07.04.2026 ರಂದು ವಿಲ್ ಮೂಲಕ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ 19 ½ ಗುಂಟೆ ಜಮೀನನ್ನು ನನ್ನ ಮಗಳಾದ ಲಕ್ಷ್ಮೀಶ್ರೀ ರವರಿಗೆ ವಿಲ್ ಮೂಲಕ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಈ ಹಿಂದೆ ಕೂಡ ವಿಲ್ ಪತ್ರ ಮಾಡಿ ಇಟ್ಟಿದ್ದು, ಅದನ್ನು ರದ್ದುಪಡಿಸಿ ದಿನಾಂಕ 07.04.2026 ರ ವಿಲ್ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ.

9. ಎರಡೂ ದಾವಾ ಸ್ವತ್ತುಗಳನ್ನು ನನ್ನ ತಾಯಿ ಅವರ ತಂದೆಯ ಸಹಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಸಹಾಯದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ.

ಓ ಎಸ್ ಸಂಖ್ಯೆ: 60/2022
ಪಿ.ಡಬ್ಲ್ಯೂ: 01 (ರೆಡ್ಡೆಪ್ಪ)

10. 2003 ನೇ ಇಸವಿಯಲ್ಲಿ ನನಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆ 2015 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***<u>ಮರುವಿಚಾರಣೆ ಇಲ್ಲ</u>***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚುಪಡಿಸಲಾಯಿತು.)**

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.